**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 1048/2024**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ.02**

**ದಿನಾಂಕಃ** 04.10.2025 **ಸಿಡಬ್ಲ್ಯೂ.03**

| | |
|---|---|
| ಹೆಸರು | ಮಧು |
| ತಂದೆ ಹೆಸರು | ಹಾಲೇಶಪ್ಪ |
| ವಯಸ್ಸು | 23 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ಮಲೆಬೆನ್ನೂರು |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ.1 ಮತ್ತು 2 ರವರ ಪರಿಚಯವಿದೆ. ಸಾಕ್ಷಿಗೆ ಒಂದು ತೋರಿಸಲಾಗಿ ಅದರಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು ಅದು ಸ್ಥಳ ಪಂಚನಾಮೆ ಆಗಿದ್ದು ಅದನ್ನು ಈಗಾಗಲೇ ನಿಪಿ.2 ಎಂದು ಸಾಕ್ಷಿಯ ಸಹಿಯನ್ನು ನಿಪಿ.2 (ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ತೋರಿಸಲಾಗಿ ಅದರಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು ಅದು ಕಚ್ಚಾ ನಕಾಶೆ ಆಗಿದ್ದು ಅದನ್ನು ನಿಪಿ.4 ಎಂದು ಸಾಕ್ಷಿಯ ಸಹಿಯನ್ನು ನಿಪಿ.4 (ಎ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಭಾಸ್ಕರ್ ರಾವ್ ಕ್ಯಾಂಪ್ ಬಳಿ ಚಾಸಾ.8 ರವರ ಬೈಕ್ ಮತ್ತು ಕೆ ಎಸ್ ಆರ್ ಟಿ ಸಿ ಬಸ್ ನಡುವೆ ದಿಃ 10.01.2024 ರಂದು ಆದ ಅಪಘಾತವಾದ ವಿಚಾರವಾಗಿ ಪಂಚನಾಗಿ ಪಂಚನಾಮೆಗೆ ಸಹಿ ಮಾಡಿರುತ್ತೇನೆ. ಸದರಿ ಕಾಲಕ್ಕೆ ಛಾಯ ಚಿತ್ರ ತೆಗೆದಿರುತ್ತಾರೆ. ಸಾಕ್ಷಿಯು ಗುರುತಿಸಿದ ಛಾಯ ಚಿತ್ರವನ್ನು ಈಗಾಗಲೇ ನಿಪಿ.3 ಎಂದು ಗುರುತಿಸಲಾಗಿದೆ. ಸದರಿ ಸಂದರ್ಭದಲ್ಲಿ ನಾನು ಚಾಸಾ.2 ರವರು ಇದ್ದೆವು. ಪೊಲೀಸರು ಪಂಚನಾಮೆಯನ್ನು ಬೆಳಿಗ್ಗೆ 11.30 ರಿಂದ 12.30 ರವರೆಗೆ ಮಾಡಿರುತ್ತಾರೆ. ಈ ವಿಚಾರವಾಗಿ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್ ಪಿ ವಕೀಲರಿಂದಃ**

ನಾನು ದ್ವಿತೀಯ ಪಿಯುಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ವ್ಯವಸಾಯ ಮಾಡುತ್ತೇನೆ. ನಾನು ಮಲೆಬೆನ್ನೂರಿನ ವಾಸಿ. ಚಾಸಾ.1 ಮತ್ತು 8 ನನಗೆ ಸಂಬಂಧಿಕರಲ್ಲ. ಚಾಸಾ.8 ನನ್ನ ಸ್ನೇಹಿತ. ಚಾಸಾ.2, ನಾನು ಮತ್ತು ಚಾಸಾ.8 ಸ್ನೇಹಿತರು ಎಂದರೆ ಸರಿ. ಪೊಲೀಸರು ನನಗೆ ಯಾವುದೇ ನೋಟಿಸ್ ನೀಡಿಲ್ಲ. ಚಾಸಾ.2 ರವರು ನನ್ನನ್ನು ಸ್ಥಳಕ್ಕೆ ಕರೆದಿದ್ದರು. ಘಟನಾ ಸ್ಥಳ ಸಾಕಷ್ಟು ವಾಹನ ಸಂಚಾರ ಇರುತ್ತದೆ ಎಂದರೆ ಸರಿ. ಜನದಟ್ಟಣೆ ಇರುವ ರಸ್ತೆ ಎಂದರೆ ಸರಿಯಲ್ಲ. ಬಾಸ್ಕರ್ ರಾವ್ ಕ್ಯಾಂಪನಲ್ಲಿ ವಾಸದ ಮನೆಗಳು ಇವೆ ಎಂದರೆ ಸರಿ. ಪಂಚನಾಮೆ ಕಾಲಕ್ಕೆ ಸ್ಥಳದಲ್ಲಿ ಬಾಸ್ಕರ್ ರಾವ್ ಕ್ಯಾಂಪನ

ನಿವಾಸಿಗಳು ಯಾರು ಇರಲಿಲ್ಲ. ನಾನು ಘಟನಾ ಸ್ಥಳದ ಸ್ಥಳೀಕನಲ್ಲ ಎಂದರೆ ಸರಿ. ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ಪಂಚನಾಮೆ ಕಾಲಕ್ಕೆ ನಾನು ಚಾಸಾ.1 ಮತ್ತು 2 ಮಾತ್ರ ಇದ್ದೆವು. ನಿಪಿ.3 ಛಾಯ ಚಿತ್ರವನ್ನು ಯಾರು ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ.2 ಪಂಚನಾಮೆಯನ್ನು ಯಾರು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ.2 ನ್ನು ಎಲ್ಲಿ ತಯಾರಿಸಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ಪೊಲೀಸರು ನನಗೆ ವಿಶ್ವಾಸಿಕರು ಆದ್ದರಿಂದ ಸಹಿ ಮಾಡು ಎಂದ ಮೇರೆಗೆ ನಾನು ಮತ್ತು ಚಾಸಾ.2 ಸಹಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಪಿ.2 ಕ್ಕೆ ಘಟನಾ ಸ್ಥಳದಲ್ಲಿ ಸಹಿ ಮಾಡಿರುತ್ತೇವೆ. ಪೊಲೀಸರು ತಯಾರಿಸಿಕೊಂಡು ಬಂದ ನಂತರ ಪಂಚನಾಮೆಗೆ ನೀವು ಸ್ಥಳದಲ್ಲಿ ಸಹಿ ಮಾಡಿದ್ದೀರಾ ಎಂದರೆ ಸಾಕ್ಷಿಯು ಠಾಣೆಯಲ್ಲಿ ಮಾಡಿದ್ದೇವೆ ಎಂದು ನುಡಿಯುತ್ತಾರೆ. ನಿಪಿ.4 ಕಚ್ಚಾ ನಕಾಶೆಗೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿ. ಸದರಿ ನಿಪಿ.2 ಮತ್ತು 4 ಕ್ಕೆ ಅಪಘಾತವಾದ ದಿನವೇ ಸಹಿ ಮಾಡಿರುತ್ತೇನೆ. ಅಪಘಾತ ಪಡಿಸಿದ ವ್ಯಕ್ತಿಯನ್ನು ನಾನು ನೋಡಿಲ್ಲ ಎಂದರೆ ಸರಿ. ನಿಪಿ.2 ನ್ನು ಬರೆಯಲು ನಾನು ಪೊಲೀಸರಿಗೆ ಮಾಹಿತಿ ನೀಡಿಲ್ಲ. ನಿಪಿ.2 ಮತ್ತು 4 ಕ್ಕೆ ಠಾಣೆಯಲ್ಲಿ ಸಹಿ ಮಾಡಿದ್ದರೂ ಸಹ ಸ್ಥಳದಲ್ಲಿ ಮಾಡಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

C/c 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ